# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೪ಎ<br>**Part – IVA** | ಬೆಂಗಳೂರು, ಗುರುವಾರ ೧೬, ಅಕ್ಟೋಬರ್, ೨೦೨೫(ಆಶ್ವಯುಜ, ೨೪, ಶಕವರ್ಷ, ೧೯೪೭)<br>BENGALURU, THURSDAY 16, OCTOBER, 2025(AASHWAYUJA, 24, SHAKAVARSHA, 1947) | ನಂ. ೬೫೭<br>**No. 657** |
|---|---|---|


## <u>ಕರ್ನಾಟಕಸರ್ಕಾರ</u>

ಸಂಖ್ಯೆ: ಹೆಚ್‌ಡಿ 159 ಪಿಸಿಇ 2025(ಭಾಗ-2)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ, ಡಾ. ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:15.10.2025

## <u>ಅಧಿಸೂಚನೆ</u>

ಬೆಳಗಾವಿಯ ಸುರ್ವಣ ಸೌಧದಲ್ಲಿ ದಿನಾಂಕ: 09.12.2024 ರಿಂದ 20.12.2024 ರವರೆಗೆ ನಡೆದ ಚಳಿಗಾಲದ ಅಧಿವೇಶನ ಸಮಯದಲ್ಲಿ, ದಿನಾಂಕ: 10.12.2024 ರಂದು ಪೊಲೀಸ್ ಆಯುಕ್ತರು, ಬೆಳಗಾವಿ ನಗರ ಇವರು ಅಧಿವೇಶನ ನಡೆಯುತ್ತಿರುವಾಗ, ನಿಷೇಧಾಜ್ಞೆ ಹಾಗೂ ಹೆಚ್ಚಿನ ಪೊಲೀಸ್ ಬಂದೋಬಸ್ತ್‌ನ ನಡುವೆಯು ಪ್ರತಿಭಟನಾಕಾರರು ಸುವರ್ಣ ವಿಧಾನ ಸೌಧದ ಆವರಣದೊಳಗೆ ಆಗಮಿಸಿದ್ದರೆ, ಗಂಭೀರ ಸ್ವರೂಪದ ಅನಾಹುತಗಳಾಗುವುದನ್ನು ತಡೆಗಟ್ಟಲು ಪ್ರತಿಭಟನಾಕಾರರನ್ನು ಕನಿಷ್ಠ ಬಲವನ್ನು ಬಳಿಸಿ, ಸುವರ್ಣ ವಿಧಾನ ಸೌಧದೊಳಗೆ ಪ್ರವೇಶಿಸದಂತೆ ಪೊಲೀಸರು ತಡೆದಿರುತ್ತಾರೆ. ಈ ಸಂಬಂಧ, ಶ್ರೀ ಜಗದ್ಗುರು ಬಸವ ಜಯಮೃತ್ಯುಂಜಯ ಸ್ವಾಮೀಜಿಯವರು ಮತ್ತು ಇತರರ ವಿರುದ್ಧ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ಧಾರವಾಡ ವಿಭಾಗೀಯ ಪೀಠವು ರಿಟ್ ಅರ್ಜಿ ಸಂಖ್ಯೆ: 107792/2024ರ ಸಂಬಂಧ, ದಿನಾಂಕ:04.04.2025 ರಂದು ನೀಡಿದ ತೀರ್ಪಿನ ವಿರುದ್ಧ ಸರ್ಕಾರವು ಧಾರವಾಡ ವಿಭಾಗೀಯ ಪೀಠದಲ್ಲಿ ಸಲ್ಲಿಸಿರುವ ರಿಟ್ ಅಪೀಲು ಸಂಖ್ಯೆ:100265/2025ರ ಬಾಬ್ತು ದಿನಾಂಕ:10.07.2025ರ ನಿರ್ದೇಶನದಂತೆ, ಗಲಭೆಯ ತನಿಖೆಗಾಗಿ ಶ್ರೀ ಬನ್ನಿಕಟ್ಟಿ ಹನುಮಂತಪ್ಪ ಆರ್. ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರನ್ನು ತನಿಖಾಧಿಕಾರಿಯನ್ನಾಗಿ ನೇಮಕ ಮಾಡಿ, ಆರು ವಾರಗಳೊಳಗಾಗಿ ತನಿಖೆಯನ್ನು ಪೂರ್ಣಗೊಳಿಸಿ ವರದಿಯನ್ನು ಸಲ್ಲಿಸುವಂತೆ ದಿನಾಂಕ: 06.08.2025ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಪ್ರಸ್ತುತ ಶ್ರೀ ಬನ್ನಿಕಟ್ಟಿ ಹನುಮಂತಪ್ಪ ಆರ್. ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಏಕ ಸದಸ್ಯ ನ್ಯಾಯಾಂಗ ವಿಚಾರಣಾಧಿಕಾರಿಗಳು ಇವರ ದಿನಾಂಕ:09.09.2025ರ ಪತ್ರದ ಕೋರಿಕೆಯನ್ವಯ ಸದರಿ ವಿಚಾರಣಾ ಆಯೋಗದ ಅವಧಿಯನ್ನು ನಿಗದಿತ 06 ವಾರಗಳ ಅವಧಿಯ ಮುಕ್ತಾಯದ ನಂತರದಿಂದ 03 ವಾರಗಳ ಅವಧಿಗೆ ವಿಸ್ತರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತುಅವರ ಹೆಸರಿನಲ್ಲಿ,

**(ನಾಗರಾಜು ಎಸ್.)**
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಕಾನೂನು & ಸುವ್ಯವಸ್ಥೆ)
☏080–2203 3254, **email**: uslo-home@karnataka.gov.in


ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**




THAMMAIAH